# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
## ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ

ನಂ. 09, 2ನೇ ಮಹಡಿ, 1ನೇ ಮುಖ್ಯರಸ್ತೆ, (ಹೊರವರ್ತುಲ ರಸ್ತೆ),ಕೆಂಗೇರಿ ಉಪನಗರ,ಬೆಂಗಳೂರು-60.

---

ಸಂಖ್ಯೆ : ಸ.ಇಂ/ವಾ-130/ವಾರ್ಡ್‌ಸಭೆ/2020-21 ದಿನಾಂಕ : 20/02/2021

**ವಾರ್ಡ್-130ರ ವಾರ್ಡ್ ಸಭೆಯ ನಡವಳಿ.**

**ದಿನಾಂಕ: 20/02/2021 ರಂದು ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿಯ ನಡುವಳಿಗಳು**

**ಸಭೆಯಲ್ಲಿ ಹಾಜರಿದ್ದ ಅಧಿಕಾರಿ ನೌಕರರು ಮತ್ತು ಸದಸ್ಯರುಗಳು:**

| ಕ್ರ ಸಂ | ಸದಸ್ಯರ ಹೆಸರು/ಪದನಾಮ | ಪದನಾಮ |
|---|---|---|
| 1 | ಶ್ರೀ ಮುತ್ತುರಾಜ್ | ಮುಖ್ಯ ಲೆಕ್ಕ ಪರಿಶೋಧನಾಧಿಕಾರಿಗಳು ನೋಡಲ್ ಅಧಿಕಾರಿ |
| 2 | ಶ್ರೀ ಕೆ.ಎಂ. ಯಧುಕೃಷ್ಣ | ಸಹಾಯಕ ಇಂಜಿನಿಯರ್ ವಾರ್ಡ್-130 ಹಾಗೂ ಸದಸ್ಯ ಕಾರ್ಯದರ್ಶಿ |
| 3 | ಶ್ರೀ. ಡಿ. ವಿನಯ್ | ಕಿರಿಯ ಆರೋಗ್ಯ ಪರಿವೀಕ್ಷಕರು ಬಿ.ಬಿ.ಎಂ.ಪಿ |
| 4 | ಶ್ರೀ ವೆಂಕಟೇಶ್ | ತೋಟಗಾರಿಕೆ ಇಲಾಖೆ |
| 5 | ಶ್ರೀ ರಾಘವೇಂದ್ರ ಎಂ | ಸಹಾಯಕ ಇಂಜಿನಿಯರ್ ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 6 | ಶ್ರೀ ಓ.ಎಂ. ಬಸವರಾಜ್ | ವಾರ್ಡ್ ಕಮಿಟಿ ಸದಸ್ಯರು |
| 7 | ಶ್ರೀ ರಾಜೇಶ್ ಬಾಬು | ವಾರ್ಡ್ ಕಮಿಟಿ ಸದಸ್ಯರು |
| 8 | ಶ್ರೀ ಎನ್. ಕದರಪ್ಪ | ವಾರ್ಡ್ ಕಮಿಟಿ ಸದಸ್ಯರು |
| 9 | ಶ್ರೀ ಕುಮಾರ್ | ಬೆಸ್ಕಾಂ ಗುತ್ತಿಗೆದಾರರು |
| 10 | ಶ್ರೀ ರಮೇಶ್ ಗೌಡ | ವಾರ್ಡ್ ಕಮಿಟಿ ಸದಸ್ಯರು |
| 11 | ಶ್ರೀ ಬಿ. ಸತೀಶ್ | ವಾರ್ಡ್ ಕಮಿಟಿ ಸದಸ್ಯರು |
| 12 | ಶ್ರೀ ಜಯರಾಮ್ | ವಾರ್ಡ್ ಕಮಿಟಿ ಸದಸ್ಯರು |

Scanned with CamScanner

| | | |
|---|---|---|
| 13 | ಶ್ರೀ ನಾಗೇಂದ್ರ | ವಾರ್ಡ್ ಕಮಿಟಿ ಸದಸ್ಯರು |
| 14 | ಶ್ರೀ ಶಶಿಕುಮಾರ್ | ವಾರ್ಡ್ ಕಮಿಟಿ ಸದಸ್ಯರು |

ವಾರ್ಡ್ ನಂ.130 ಉಲ್ಲಾಳ ವಾರ್ಡ್‌ನ ಸಹಾಯಕ ಇಂಜಿನಿಯರ್ ಹಾಗೂ ಸದಸ್ಯ ಕಾರ್ಯದರ್ಶಿಯವರು ಸಭೆಯಲ್ಲಿ ಹಾಜರಿದ್ದ ಅಧಿಕಾರಿ ನೌಕರರು ಮತ್ತು ವಾರ್ಡ್ ಕಮಿಟಿ ಸದಸ್ಯರನ್ನು ಸ್ವಾಗತಿಸಿದರು.

ನೋಡಲ್ ಅಧಿಕಾರಿಗಳು ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಾ, ವಾರ್ಡಿನ ವ್ಯಾಪ್ತಿಯಲ್ಲಿ ಸಾರ್ವಜನಿಕರ ಕುಂದು ಕೊರತೆಗಳ ಬಗ್ಗೆ ಸಭೆಯಲ್ಲಿ ಹಾಜರಿದ್ದ ಅಧಿಕಾರಿ/ನೌಕರರು ಮತ್ತು ವಾರ್ಡ್ ಕಮಿಟಿ ಸದಸ್ಯರುಗಳಿಂದ ಮಾಹಿತಿ ಪಡೆದರು.

ಸಭೆಯಲ್ಲಿ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಿ ಅಗತ್ಯ ಪರಿಹಾರ ಕ್ರಮಗಳನ್ನು ಕೈಗೊಳ್ಳಲು ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ಸೂಚಿಸಿದರು.

(ಅ) ಜ್ಞಾನಭಾರತಿ 1ನೇ ಹಂತ ಶಿವಕುಮಾರ್ ಸ್ವಾಮಿ ಛತ್ರದ ಪಕ್ಕದ ರಸ್ತೆಯಲ್ಲಿ ಕೈಗೊಂಡಿರುವ ಕಾಮಗಾರಿಯನ್ನು ಪರಿವೀಕ್ಷಣೆ ನಡೆಸಿ ಕಾಮಗಾರಿಯ ಬಗ್ಗೆ ವರದಿ ನೀಡಲು ಸಭೆಯಲ್ಲಿ ಹಾಜರಿದ್ದ ಸದಸ್ಯರು ತಿಳಿರುತ್ತಾರೆ.

(ಆ) ಗುತ್ತಿಗೆದಾರರಾದ ಶ್ರೀ ರವಿಚಂದ್ರ ರವರು ವಾರ್ಡ್ ನಂ.130ರ ವ್ಯಾಪ್ತಿಯಲ್ಲಿ ಬೋರ್‌ವೆಲ್ ನಿರ್ವಹಣೆ ನಡೆಸುತ್ತಿದ್ದು, ಇವರು ಸಮರ್ಪಕವಾಗಿ ಬೋರ್‌ವೆಲ್‌ಗಳನ್ನು ನಿರ್ವಹಿಸದಿರುವ ಬಗ್ಗೆ ವಾರ್ಡ್ ಕಮಿಟಿಯ ಸದಸ್ಯರು ಸಭೆಗೆ ತಿಳಿಸಿದರು.

(ಇ) ಜ್ಞಾನಭಾರತಿ 1ನೇ ಹಂತದಲ್ಲಿ ಕಳಪೆ ಕಾಮಗಾರಿ ನಡೆದಿರುವುದಾಗಿ ತಿಳಿಸುತ್ತಾ, ಸಂಬಂಧಪಟ್ಟ ಗುತ್ತಿಗೆದಾರರಿಂದ ಕೆಲಸ ನಿರ್ವಹಿಸುವಂತೆ ಸಾರ್ವಜನಿಕರು ಸಭೆಗೆ ಕೋರಿದರು.

(ಈ) ಉಲ್ಲಾಳ ಉಪನಗರದಲ್ಲಿ ಶೌಚಾಲಯ ನಿರ್ಮಿಸಿದ್ದು, ಸದರಿ ಇರುವ ಸ್ಥಳದಲ್ಲಿ ಡೆಬ್ರೀಸ್‌ನ್ನು ತೆಗೆಸಬೇಕೆಂದು ಸಾರ್ವಜನಿಕರು ಸಭೆಗೆ ತಿಳಿಸಿದರು.

ಈ ಸಂಬಂಧ ನೋಡಲ್ ಅಧಿಕಾರಿಗಳು ಮಾತನಾಡಿ ವಾರ್ಡ್ ಇಂಜಿನಿಯರ್‌ರವರೊಂದಿಗೆ ಚರ್ಚಿಸಿ ಮೇಲಿನ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಕ್ರಮ ಕೈಗೊಳ್ಳಲು ಸೂಚಿಸುವುದಾಗಿ ಸಭೆಗೆ ತಿಳಿಸಿದರು (ಕ್ರಮ:- ವಾರ್ಡ್‌ನ ಸಹಾಯಕ ಅಭಿಯಂತರರು, ವಾರ್ಡ್ ನಂ.130, ಉಲ್ಲಾಳ).

1) ವಾರ್ಡ್ ಕಮಿಟಿ ಸದಸ್ಯರಾದ ಶ್ರೀ ಎನ್. ಕದರಪ್ಪ ರವರು ಕೆರೆಗಳ ಅಭಿವೃದ್ಧಿ ಪ್ರಾಧಿಕಾರದ ಸಹಾಯಕ ಕಾರ್ಯಪಾಲಕ ಅಭಿಯಂತರರು ಕಡ್ಡಾಯವಾಗಿ ಪ್ರತಿ ವಾರ್ಡ್ ಕಮಿಟಿ ಸಭೆಗೆ

Scanned with CamScanner

ಹಾಜರಾಗುವಂತೆ ತಿಳಿಸಲು ಸಭೆಯಲ್ಲಿ ಕೋರಿದರು. ಈ ಸಂಬಂಧ ನೋಡಲ್ ಅಧಿಕಾರಿಯವರು ಮಾತನಾಡಿ ಸಹಾಯಕ ಕಾರ್ಯಪಾಲಕ ಅಭಿಯಂತರರು (ಕೆರೆಗಳ ವಿಭಾಗ) ರವರಿಗೆ ಹಲವಾರು ಬಾರಿ ಪತ್ರದ ಮುಖಾಂತರ ವಾರ್ಡ್ ಕಮಿಟಿ ಸಭೆಗೆ ಹಾಜರಾಗುವಂತೆ ಸೂಚಿಸಿದ್ದರೂ ಸಹ ಇವರು ಗೈರು ಹಾಜರಾಗುತ್ತಿರುವುದರಿಂದ ಈ ವಿಷಯವನ್ನು ಮೇಲಾಧಿಕಾರಿಯವರಿಗೆ ವರದಿ ಸಲ್ಲಿಸಲಾಗುವುದೆಂದು ಸಭೆಯಲ್ಲಿ ತಿಳಿಸಿದರು.

2) ವಾರ್ಡ್ ನಂ.130ರ ವ್ಯಾಪ್ತಿಯಲ್ಲಿ ಬರುವ ಉದ್ಯಾನವನ(ಪಾರ್ಕ್)ಗಳನ್ನು ಸರಿಯಾಗಿ ನಿರ್ವಹಣೆ ಮಾಡದ ಕಾರಣ ಒಟ್ಟು 17 (ಕೆ.ಪಿ.ಎಸ್.ಸಿ. ಪಾರ್ಕ್, ಜ್ಞಾನಗಣಪತಿ ಪಾರ್ಕ್, ಐ.ಬಿ. ಆಫಿಸರ್ ಲೇಔಟ್ ಪಾರ್ಕ್, ವಳಗೇರಹಳ್ಳಿ ಪಾರ್ಕ್, ನಾಗದೇವನಹಳ್ಳಿ ಪಾರ್ಕ್ ಹಾಗೂ ಇತರೆ )ಪಾರ್ಕ್‌ಗಳು ಹಾಳಾಗುತ್ತಿರುವ ಬಗ್ಗೆ ವಾರ್ಡ್ ಕಮಿಟಿ ಸದಸ್ಯರು ಸಭೆಯಲ್ಲಿ ತಿಳಿಸಿದರು. ಈ ಸಂಬಂಧ ನೋಡಲ್ ಅಧಿಕಾರಿಗಳು ತೋಟಗಾರಿಕಾ ಅಧೀಕ್ಷಕರಿಗೆ ವಾರ್ಡ್ 130ರ ವ್ಯಾಪ್ತಿಯಲ್ಲಿ ಬರುವ ಉದ್ಯಾನವನ(ಪಾರ್ಕ್)ಗಳನ್ನು ನಿರ್ವಹಣೆ ಮಾಡಿ ಸಾರ್ವಜನಿಕರಿಗೆ ಅನುಕೂಲವಾಗುವಂತೆ ಮಾಡಲು ತಿಳಿಸಿದರು (ಕ್ರಮ:- ತೋಟಗಾರಿಕಾ ಅಧೀಕ್ಷಕರು, ಬಿ.ಬಿ.ಎಂ.ಪಿ).

3) ಹಿಂದಿನ ಸಭೆಯಲ್ಲಿ ಕುಡಿಯುವ ನೀರಿನ ಸಮಸ್ಯೆಗಳನ್ನು ನಿವಾರಿಸಲು ಕೊಳವೆಬಾವಿಗಳನ್ನು ಕೊರೆಯಲು ಸಭೆಯಲ್ಲಿ ಚರ್ಚಿಸಲಾಯಿತು. ಈ ಸಂಬಂಧ ವಾರ್ಡ್ ವ್ಯಾಪ್ತಿಯಲ್ಲಿ ಈಗಾಗಲೇ ಕೆಲವು ಕೊಳವೆ ಬಾವಿಗಳನ್ನು ಕೊರೆಸಿರುವುದಾಗಿ ವಾರ್ಡ್‌ನ ಸಹಾಯಕ ಅಭಿಯಂತರರು ಸಭೆಯಲ್ಲಿ ತಿಳಿಸಿದರು.

ಅಂತಿಮವಾಗಿ ವಾರ್ಡ್‌ನ ಎಲ್ಲಾ ವಾರ್ಡ್ ಕಮಿಟಿಯ ಸದಸ್ಯರಗಳ ಮತ್ತು ವಿವಿಧ ಸಂಘ ಸಂಸ್ಥೆಗಳು ಜೊತೆಗೂಡಿ ಸಮನ್ವಯ ಸಾಧಿಸಿ ಕುಂದು ಕೊರತೆಗಳನ್ನು ಪರಿಹರಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಎಲ್ಲಾ ಅಧಿಕಾರಿ ವರ್ಗದವವರಿಗೆ ಸೂಚಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

K. M. Halli

(ಮುತ್ತುರಾಜ್)
ಮುಖ್ಯ ಲೆಕ್ಕ ಪರಿಶೋಧನಾಧಿಕಾರಿಗಳು
ಹಾಗೂ ನೋಡಲ್ ಅಧಿಕಾರಿ,
ವಾರ್ಡ್‌ನಂ.130, ಉಲ್ಲಾಳ
ಕೆಂಗೇರಿ ಉಪ ವಿಭಾಗ
ಬಿ.ಬಿ.ಎಂ.ಪಿ.,ಬೆಂಗಳೂರು.

**ಪ್ರತಿಯನ್ನು:**

1) ವಲಯ ಆಯುಕ್ತರು ಹಾಗೂ ವಿಶೇಷ ಆಯುಕ್ತರು(ಆಡಳಿತ) ಬಿ.ಬಿ.ಎಂ.ಪಿ. ರವರ ಅವಗಾಹನೆಗಾಗಿ ತರಲು ಅವರ ಆಪ್ತ ಸಹಾಯಕರಿಗೆ ಸಲ್ಲಿಸಿದೆ.
2) ಜಂಟಿ ಆಯುಕ್ತರು, ರಾಜರಾಜೇಶ್ವರಿನಗರ ವಲಯ ರವರ ಅವಗಾಹನೆಗಾಗಿ ಸಲ್ಲಿಸಿದೆ.

Scanned with CamScanner

3) ಮುಖ್ಯ ಅಭಿಯಂತರರು, ರಾಜರಾಜೇಶ್ವರಿನಗರ ವಲಯ ರವರ ಅವಗಾಹನೆಗಾಗಿ ಸಲ್ಲಿಸಿದೆ.
4) ಕಾರ್ಯಪಾಲಕ ಅಭಿಯಂತರರು, ಕೆಂಗೇರಿ ವಿಭಾಗ ರವರ ಮಾಹಿತಿಗಾಗಿ ಕಳುಹಿಸಿದೆ.
5) ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೆಂ.ಉ.ವಿ/ ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ(ಯಶವಂತಪುರ) ರವರ ಮಾಹಿತಿಗಾಗಿ ಕಳುಹಿಸಿದೆ.
6) ಎಲ್ಲಾ ವಾರ್ಡ್ ಕಮಿಟಿ ಸದಸ್ಯರ ಮಾಹಿತಿಗಾಗಿ ಕಳುಹಿಸಿದೆ.
7) ಕಛೇರಿ ಪ್ರತಿ

Scanned with CamScanner